ವಿಕಿರಣದಿಂದ ನರವನ್ನು ಹಾನಿಗೊಳಿಸುವ ವಿಧಾನ. ನೋವು ನಿವಾರಣೆ ಕ್ರಮೇಣ ಸಂಭವಿಸುತ್ತದೆ ಮತ್ತು ಒಂದು ತಿಂಗಳವರೆಗೆ ತೆಗೆದುಕೊಳ್ಳಬಹುದು.

### ರೈಜೋಟಮಿ ವಿಧಾನಗಳು

ನರ ನಾರುಗಳನ್ನು ನಾಶಪಡಿಸಿ ನೋವನ್ನು ನಿಯಂತ್ರಿಸುವ ವಿಧಾನಗಳು.

- **ಗ್ಲಿಸರಾಲ್ ಇಂಜೆಕ್ಷನ್:** ರಾಸಾಯನಿಕ ವಸ್ತುವಿನಿಂದ ನರವನ್ನು ಹಾನಿಗೊಳಿಸುವುದು.
- **ಬಲೂನ್ ಕಂಪ್ರೆಷನ್:** ಒತ್ತಡದಿಂದ ನರವನ್ನು ಹಾನಿಗೊಳಿಸುವುದು.
- **ರೇಡಿಯೊಫ್ರೀಕ್ವೆನ್ಸಿ ಥರ್ಮಲ್ ಲೆಸಿಯಾನಿಂಗ್:** ಶಾಖದಿಂದ ನರ ನಾರುಗಳನ್ನು ನಾಶಪಡಿಸುವುದು.

### ನವೀನ ಚಿಕಿತ್ಸಾ ವಿಧಾನಗಳು

- **ಪರ್ಕ್ಯುಟೇನಿಯಸ್ ಮೈಕ್ರೋಪಲ್ಸ್ ನರ್ವ್ ಮಾಡ್ಯುಲೇಷನ್:** ಈ ಅತ್ಯಾಧುನಿಕ ತಂತ್ರಜ್ಞಾನದಲ್ಲಿ ನೈಜ ಸಮಯದ ಇಮೇಜಿಂಗ್ ಮಾರ್ಗದರ್ಶನದೊಂದಿಗೆ ಅತಿ ತೆಳುವಾದ ಸೂಜಿಯನ್ನು ಬಳಸಿ ಬಾಧಿತ ನರಕ್ಕೆ ಮೃದುವಾದ, ಸುವ್ಯವಸ್ಥಿತ ಪ್ರಚೋದನೆಗಳನ್ನು ನೀಡಲಾಗುತ್ತದೆ. ಈ ವಿಧಾನವು ನೋವಿನ ಸಂಕೇತಗಳನ್ನು ನಿಯಂತ್ರಿಸುವ ಮೂಲಕ ರೋಗಿಗಳಿಗೆ ಪರಿಹಾರ ಒದಗಿಸುತ್ತದೆ.
- **ಎಂಡೊಸ್ಕೋಪಿಕ್ ಡಿಕಂಪ್ರೆಷನ್ ಚಿಕಿತ್ಸೆ:** ಆಧುನಿಕ ಎಂಡೊಸ್ಕೋಪಿಕ್ ಡಿಕಂಪ್ರೆಷನ್ ವಿಧಾನಗಳು ಸಾಂಪ್ರದಾಯಿಕ ತೆರೆದ ಶಸ್ತ್ರಚಿಕಿತ್ಸೆಗೆ ಪರ್ಯಾಯವಾಗಿವೆ. ಅತಿ ಸಣ್ಣ ಛೇದನಗಳು, ವೇಗವಾದ ಗುಣಪಡಿಸುವಿಕೆ ಮತ್ತು ಕನಿಷ್ಠ ಪ್ರಮಾಣದ ಗುರುತುಗಳು ಈ ವಿಧಾನಗಳ ಪ್ರಯೋಜನಗಳಾಗಿವೆ. ಆಸ್ಪತ್ರೆಯಲ್ಲಿ ಕಡಿಮೆ ಅವಧಿ ಇರುವಿಕೆ, ತ್ವರಿತ ಚೇತರಿಕೆ ಮತ್ತು ದೈನಂದಿನ ಚಟುವಟಿಕೆಗಳಿಗೆ ಬೇಗನೆ ಹಿಂದಿರುಗಲು ಈ ವಿಧಾನವು ಸಹಕಾರಿ. ವಿಶೇಷವಾಗಿ ಹಿರಿಯ ವಯಸ್ಸಿನ ರೋಗಿಗಳಿಗೆ ಮತ್ತು ಸಂಕೀರ್ಣ ಆರೋಗ್ಯ ಸಮಸ್ಯೆಗಳಿರುವವರಿಗೆ ಈ ವಿಧಾನ ಹೆಚ್ಚು ಸೂಕ್ತವಾಗಿದೆ.
- **ನರ ನಿರ್ಬಂಧಕ ಬೋಟಾಕ್ಸ್ ಚುಚ್ಚುಮದ್ದು:** ಸಾಂಪ್ರದಾಯಿಕ ಔಷಧಿಗಳಿಂದ ಪರಿಹಾರ ಸಿಗದ ರೋಗಿಗಳಿಗೆ ನರ ನಿರ್ಬಂಧಕ ಇಂಜೆಕ್ಷನ್ (ಬೋಟಾಕ್ಸ್) ಹೊಸ ಭರವಸೆಯಾಗಿದೆ. ಈ ವಿಧಾನದಲ್ಲಿ ನರ ಚಟುವಟಿಕೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಔಷಧ ನೀಡಲಾಗುತ್ತದೆ. ನೋವಿನ ಸಂಕೇತಗಳು ಮೆದುಳಿಗೆ ತಲುಪದಂತೆ ತಡೆಯುವ ಈ ಔಷಧ, ನೋವು ಕಡಿಮೆಯಾಗಿಸುತ್ತದೆ. ಈ ಚಿಕಿತ್ಸೆಯು ಟ್ರೈಜೆಮಿನಲ್ ನ್ಯೂರಾಲ್ಜಿಯಾದಿಂದ ಉಂಟಾಗುವ ನೋವನ್ನು ಗಣನೀಯವಾಗಿ ಕಡಿಮೆ ಮಾಡಬಲ್ಲದು ಎನ್ನುತ್ತವೆ ಅಧ್ಯಯನಗಳು.

## ಟ್ರೈಜೆಮಿನಲ್ ನರಶೂಲೆಗೆ ಚಿಕಿತ್ಸೆಯಿದೆಯೇ?

ಅನೇಕರು ಟ್ರೈಜೆಮಿನಲ್ ನರಶೂಲೆಗೆ ಯಾವುದೇ ಚಿಕಿತ್ಸೆಯಿಲ್ಲ ಎಂಬ ತಪ್ಪುಕಲ್ಪನೆ ಹೊಂದಿದ್ದಾರೆ. ವಾಸ್ತವವಾಗಿ, ಈ ರೋಗಕ್ಕೆ ಆಧುನಿಕ ವೈಜ್ಞಾನಿಕ ಚಿಕಿತ್ಸಾ ವಿಧಾನಗಳ ಆಧಾರದ ಮೇಲೆ ವ್ಯವಸ್ಥಿತ ಮತ್ತು ಪರಿಣಾಮಕಾರಿ ಚಿಕಿತ್ಸಾ ಕಾರ್ಯತಂತ್ರಗಳಿವೆ. ಚಿಕಿತ್ಸೆಯು ಸಾಮಾನ್ಯವಾಗಿ ಔಷಧಿಗಳೊಂದಿಗೆ ಪ್ರಾರಂಭವಾಗುತ್ತದೆ.

### 'ಆತ್ಮಹತ್ಯಾ ರೋಗ'ದೊಂದಿಗೆ ಜೀವನ

- **ನೋವು ಪ್ರಚೋದಕ ಗುರುತಿಸುವಿಕೆ ಮತ್ತು ತಪ್ಪಿಸುವಿಕೆ:** ನೋವು ಪ್ರಚೋದಿಸುವ ಸಂಗತಿಗಳ ಬಗ್ಗೆ ದಿನಚರಿಯಲ್ಲಿ ಬರೆದಿಟ್ಟುಕೊಳ್ಳಿ. ಮುಂದೆ ಆ ಪರಿಸ್ಥಿತಿಗಳಿಂದ ತಪ್ಪಿಸಿಕೊಳ್ಳಲು ಸಹಾಯಕ.
- **ಆಹಾರ ಸೇವನೆಯಲ್ಲಿ ಜಾಗರೂಕತೆ:** ಮೃದುವಾದ ಆಹಾರ ಪದಾರ್ಥಗಳ ಆಯ್ಕೆ. ಸೂಪ್, ಮೊಸರು, ಮೃದುವಾದ ಅನ್ನ, ಹಣ್ಣಿನ ರಸಗಳು ಮುಂತಾದವುಗಳು ಸೂಕ್ತ. ನಿಧಾನವಾಗಿ ಆಹಾರ ಸೇವಿಸಿ.
- **ಬಾಯಿಯ ನೈರ್ಮಲ್ಯ:** ನೀರನ್ನು ಬಳಸಿ ಬಾಯಿಯ ನೈರ್ಮಲ್ಯ ಕಾಪಾಡಿ. ಹಲ್ಲು ಉಜ್ಜಲು ಮೃದುವಾದ ಬ್ರಷ್ ಬಳಸಿ, ಮೃದುವಾಗಿ ಹಲ್ಲು ಉಜ್ಜಿ.
- **ಮುಖದ ರಕ್ಷಣೆ:** ಚಳಿಗಾಲದಲ್ಲಿ, ತಣ್ಣನೆಯ ಗಾಳಿ ದಿನಗಳಲ್ಲಿ ಮತ್ತು ಹವಾಮಾನ ಬದಲಾವಣೆಯ ಸಮಯದಲ್ಲಿ ಮುಖ ರಕ್ಷಿಸಲು ಮೃದು ಕವಚ ಅಥವಾ ಸ್ಕಾರ್ಫ್ ಧರಿಸಿ.

## ಆತ್ಮವಿಶ್ವಾಸ ಬೆಳೆಸುವ ಮಾರ್ಗಗಳು

- ರೋಗ ಮತ್ತು ಅದರ ಚಿಕಿತ್ಸೆಯ ಬಗ್ಗೆ ಸರಿಯಾದ ಜ್ಞಾನ ಪಡೆಯುವುದು.
- ಯಶಸ್ವಿ ಚಿಕಿತ್ಸೆಯ ಉದಾಹರಣೆಗಳನ್ನು ತಿಳಿದುಕೊಳ್ಳುವುದು.
- ಕುಟುಂಬ ಮತ್ತು ಸ್ನೇಹಿತರ ಬೆಂಬಲವನ್ನು ಪಡೆಯುವುದು.
- ವೈದ್ಯರೊಂದಿಗೆ ತೆರೆದ ಸಂವಾದ ಮಾಡುವುದು.

- **ಸಾಮಾಜಿಕ–ಮಾನಸಿಕ ಬೆಂಬಲ:** ಕುಟುಂಬ, ಸ್ನೇಹಿತರು ಮತ್ತು ಮಾನಸಿಕ ಆರೋಗ್ಯ ತಜ್ಞರೊಂದಿಗೆ ಸಂಪರ್ಕ ಕಾಯ್ದುಕೊಳ್ಳಿ. ಇತರ ರೋಗಿಗಳ ಅನುಭವಗಳನ್ನು ಕೇಳಿ. ನಿಮ್ಮ ಸಮಸ್ಯೆಗಳನ್ನು ಅವರೊಂದಿಗೆ ಹಂಚಿಕೊಳ್ಳಿ. ಇದರಿಂದ ಮಾನಸಿಕ ಬಲವನ್ನು ಕೊಡುತ್ತದೆ.

### ಯಾವ ವೈದ್ಯರನ್ನು ಸಂಪರ್ಕಿಸಬೇಕು?

- **ಪ್ರಾಥಮಿಕ ಚಿಕಿತ್ಸೆ:** ಬಾಯಿ ಮತ್ತು ಮುಖ ವೈದ್ಯಶಾಸ್ತ್ರ ತಜ್ಞರು (ಓರಲ್ ಮೆಡಿಸಿನ್) ಆರಂಭಿಕ ಪರೀಕ್ಷೆ ಮತ್ತು ರೋಗ ನಿರ್ಣಯ ಮಾಡುತ್ತಾರೆ. ಮೊದಲ ಹಂತದ ಔಷಧ ಚಿಕಿತ್ಸೆ ನೀಡುತ್ತಾರೆ. ಔಷಧೋಪಚಾರದಿಂದ ಪರಿಹಾರವಾಗದಿದ್ದಲ್ಲಿ ಮುಂದಿನ ಹಂತಕ್ಕೆ ಕಳುಹಿಸುತ್ತಾರೆ.
- **ವಿಶೇಷ ಪರೀಕ್ಷೆ:** ಮುಖದವಡೆ ಶಸ್ತ್ರಚಿಕಿತ್ಸಕರು (ಓರಲ್ ಮ್ಯಾಕ್ಸಿಲೋಫೇಷಿಯಲ್ ಸರ್ಜನ್) ಬಾಹ್ಯ ನರಗಳ (ಪೆರಿಫೆರಲ್ ನರ್ವ್) ಪ್ರಭಾವವನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಾರೆ. ನೋವಿನ ಪ್ರಕಾರವನ್ನು ವರ್ಗೀಕರಿಸುತ್ತಾರೆ.
- **ಬಾಹ್ಯ ನರಗಳ ಸಮಸ್ಯೆಯಾದಲ್ಲಿ:** ಔಷಧ ಮತ್ತು ಶಸ್ತ್ರಚಿಕಿತ್ಸೆ ಎರಡೂ ವಿಧಾನಗಳನ್ನು ಬಳಸುತ್ತಾರೆ. ಬಾಯಿಯ ಒಳಗೆ ಮತ್ತು ಹೊರಗೆ ಅಗತ್ಯ ಚಿಕಿತ್ಸೆ ಒದಗಿಸುತ್ತಾರೆ.
- **ಕೇಂದ್ರೀಯ ನರಮಂಡಲದ ಪ್ರಭಾವವಿದ್ದಲ್ಲಿ:** ನರವಿಜ್ಞಾನ ತಜ್ಞರನ್ನು (ನ್ಯೂರಾಲಜಿಸ್ಟ್) ಸಂಪರ್ಕಿಸಬೇಕು. ನರ ವೈದ್ಯರು ಸಮಗ್ರ ಪರೀಕ್ಷೆ ನಡೆಸುತ್ತಾರೆ. ಔಷಧ ಚಿಕಿತ್ಸೆಯಿಂದ ಗುಣಪಡಿಸಬಹುದೇ ಎಂದು ನಿರ್ಣಯಿಸುತ್ತಾರೆ. ಶಸ್ತ್ರಚಿಕಿತ್ಸೆಯ ಅವಶ್ಯಕತೆಯಿದ್ದಲ್ಲಿ ವಿಶೇಷ ಶಸ್ತ್ರಚಿಕಿತ್ಸಕರ ಬಳಿಗೆ ಕಳುಹಿಸುತ್ತಾರೆ.
  - **ನ್ಯೂರೋಸರ್ಜನ್ (ನರಶಸ್ತ್ರಚಿಕಿತ್ಸಕ):** ಸ್ಕಲ್ ಬೇಸ್ ಸರ್ಜನ್ (ಕಪಾಲದ ಆಧಾರಭಾಗ ಶಸ್ತ್ರಚಿಕಿತ್ಸಕ). ಇವರು ಸಂಬಂಧಿತ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ನಿರ್ವಹಿಸುತ್ತಾರೆ.



ಪ್ರತಿಕ್ರಿಯಿಸಿ: feedback@sudha.co.in